..

**ಓ ಎಸ್ ನಂಃ 156-17** **ಡಿಡಬ್ಲ್ಯೂ - 2**

**ಸಾಕ್ಷಿಯನ್ನು ದಿನಾಂಕಃ 20.06.2018 ರಂದು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

ಪ್ರತಿವಾದಿ -1 ತನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ದಾಖಲಿಸಿದ್ದು ಅದರಲ್ಲಿರುವ ಸಂಗತಿಗಳು ಸತ್ಯ ಹಾಗೂ ಸರಿ ಇರುತ್ತವೆ.

**ಪಾಟಿ ಸವಾಲಿಗಾಗಿ ವೇಳೆ ಕೇಳಿದ್ದರಿಂದ ಪ್ರಕರಣ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇ ಎ ಒಪ್ಪಿಕೊಳ್ಳಲಾಯಿತು.

1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
**ಹುಬ್ಬಳ್ಳಿ.**

..

**ಎಂ ವಿ ಸಿ ನಂಃ 942-16** **ಆರ್ ಡಬ್ಲ್ಯೂ-1**

**ಸಾಕ್ಷಿಯನ್ನು ದಿನಾಂಕಃ 20.06.2018 ರಂದು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲುಃ ಶ್ರೀ ವಿ ಎಸ್ ಆರ್ ವಕೀಲರಿಂದ ಎದುರುದಾರರ ಪರವಾಗಿಃ-**

.ನಾನು 7 ನೇ ತರಗತಿವರೆಗೆ ಓದಿದ್ದೇನೆ. ನಾನು ನನ್ನ ವೈಯಕ್ತಿಕವಾಗಿ ಸಾಕ್ಷಿ ನುಡಿಯುತ್ತಿದ್ದೇನೆ. ನಮ್ಮ ಮೇಲಾಧಿಕಾರಿಗಳು ಈ ರೀತಿ ಸಾಕ್ಷಿ ಹೇಳು ಎಂದಿದ್ದರಿಂದ ಈ ರೀತಿ ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಈ ಪ್ರಮಾಣ ಪತ್ರ ಸಲ್ಲಿಸಲು ಮಾಹಿತಿ ನಾನೇ ಕೊಟ್ಟಿದ್ದೇನೆ. ಅಪಘಾತವಾದ ನಂತರ ನಮ್ಮ ಮೇಲಾಧಿಕಾರಿಗಳ ಹೇಳಿಕೆಯ ಮೇರೆಗೆ ದೂರು ಸಲ್ಲಿಸಿದ್ದೆ ಎಂದರೆ ಸರಿಯಲ್ಲ. ಯಾವುದೇ ಅಪಘಾತವಾದರೆ ನಮ್ಮ ಮೇಲಾಧಿಕಾರಿಗಳಿಗೆ ತಿಳಿಸುತ್ತೇವೆ ಆದರೆ ದೂರು ಸಲ್ಲಿಸಲು ಕೇಳುವುದಿಲ್ಲ. ಈ ಅಪಘಾತ ನನ್ನ ತಪ್ಪಿನಿಂದ ಆಗಿದ್ದರೂ ಸಹ ಸುಳ್ಳು ದೂರನ್ನು ಸಲ್ಲಿಸಿದ್ದೇನೆಂದರೆ ಸರಿಯಲ್ಲ. ನಾನು ಸಲ್ಲಿಸಿದಂತಹ ದೂರು ಸುಳ್ಳು ಇದೆ ಎಂದು ಪೋಲಿಸರು ಬಿ- ವರದಿ ಸಲ್ಲಿಸಿದ್ದಾರೆಂದರೆ ಹೌದು. ಆ ಬಿ-ವರದಿಯನ್ನು ನಾನೇನು ಪ್ರಶ್ನಿಸಿಲ್ಲ. ನಾನು ಸಲ್ಲಿಸಿದ ದಾಖಲೆಗಳಲ್ಲಿ ದೂರು ಹಾಗೂ ಪ್ರಥಮ ವರ್ತಮಾನ ವರದಿ ಮಾತ್ರ ಇದ್ದು ಆದರೆ ಬಿ- ವರದಿ ಇಲ್ಲ ಎಂದರೆ ಹೌದು. ಸದರಿ ವರದಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದರೆ ಅಪಘಾತ ನನ್ನ ತಪ್ಪಿನಿಂದ ಆಗಿದೆ ಎಂದು ಗೊತ್ತಾಗುತ್ತದೆಂದು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಅಪಘಾತವಾದ ಸ್ಥಳ ರಸ್ತೆಯ ಬಲಭಾಗದಲ್ಲಿದೆ ಎಂದರೆ ಸರಿಯಲ್ಲಿ ರಸ್ತೆಯ ಎಡಭಾಗದಲ್ಲಿದೆ. ಅಪಘಾತ ನನ್ನ ತಪ್ಪಿನಿಂದ ಆಗಿದ್ದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಮ್ಮ ಸಂಸ್ಥೆಯವರು ಪರಿಹಾರ ಕೊಡಲು ತಪ್ಪಿಸಿಕೊಳ್ಳಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಅರ್ಜಿದಾರನಿಗೆ ಅಪಘಾತವಾದ ನಂತರ ಕಿಮ್ಸ ಆಸ್ಪತ್ರೆಗೆ ನಾನೇ ಕಳಿಸಿದ್ದೆ. ಆತನ ಜೊತೆಗೆ ಆತನ ಮಗ ಮಂಜುನಾಥ ಸಹ ಚಿಕಿತ್ಸೆ ಕೊಡಿಸಲು ಹೋಗಿದ್ದ ಎಂದರೆ ಸ್ವಲ್ಪ ಜನ ಹೋಗಿದ್ದರು ಆದರೆ ಅದರಲ್ಲಿ ಅರ್ಜಿದಾರನ ಮಗ ಇದ್ದನೋ ಇಲ್ಲವೋ ಗೊತ್ತಿಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇ ಎ ಒಪ್ಪಿಕೊಳ್ಳಲಾಯಿತು.

1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
**ಹುಬ್ಬಳ್ಳಿ.**

**ಓ ಎಸ್ ನಂಃ 398-13** **ಡಿಡಬ್ಲ್ಯೂ-1**

**ಸಾಕ್ಷಿಯನ್ನು ದಿನಾಂಕಃ 20.06.2018 ರಂದು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**
**ಪಾಟೀ ಸವಾಲುಃ ಶ್ರೀ BDH ವಕೀಲರಿಂದ ವಾದಿ ಪರವಾಗಿಃ-**

**..9..** ಕಳೆದ ಬಾರಿ ನಾನು ನ್ಯಾಯಾಲಯಕ್ಕೆ ಸಾಕ್ಷಿ ನುಡಿಯಲು ಬಂದ ನಂತರವು ಸಹ ಈ ಮೇಲೆ ಹೇಳಿದ ದಾವಾ ಆಸ್ತಿಗೆ ಭೇಟಿ ಕೊಟ್ಟಿಲ್ಲ. ಸಧ್ಯ ದಾವಾ ಆಸ್ತಿಯ ಪರಿಸ್ಥಿತಿ ಏನಿದೆ ಎಂದು ನನಗೆ ಗೊತ್ತಿಲ್ಲ. ನನ್ನ ಜಾಗಾ ಯಾವುದೆಂದು ಗುರುತಿಸಲು ಆಗುತ್ತದೆ. ನಿಪಿ.25 ನಮ್ಮ ಆಸ್ತಿಗೆ ಸಂಬಂಧಪಟ್ಟಂತಹ ಸಿಟಿ ಸರ್ವೆ ಮ್ಯಾಪ ಎಂದರೆ ಹೌದು. ಸದರಿ ನಿಪಿ.25 ನ್ನು ನೋಡಿ ನನ್ನ ಆಸ್ತಿ ಎಲ್ಲಿ ಬರುತ್ತದೆಂದು ನನಗೆ ಹೇಳಲು ಬರುವುದಿಲ್ಲ ಜಾಗಾ ನೋಡಿ ಹೇಳಬಲ್ಲೆ. ಸದರಿ ದಾವಾ ಆಸ್ತಿಯನ್ನು ಖರೀದಿ ಮಾಡಿದಾಗ ಅಲ್ಲಿ ಬೇರೆ ಯಾರು ಅಲ್ಲಿ ಖರೀದಿ ಮಾಡಿರಲಿಲ್ಲ. ಸದರಿ ದಾವಾ ಆಸ್ತಿ ಅಕ್ಕಪಕ್ಕ ಯಾರ್ಯಾರ ಯಾವ್ಯಾವ ಆಸ್ತಿಯನ್ನು ಯಾವಾಗ ಖರೀದಿ ಮಾಡಿದರೆಂದು ನನಗೆ ಗೊತ್ತಿಲ್ಲ. ಅದೇ ರೀತಿ ದಾಖಲೆ ಸಹ ನೋಡಿಲ್ಲ. ಅದೇ ರೀತಿ ಸದರಿ ಆಸ್ತಿಯಲ್ಲಿ ಕೆಲವರು ಆಸ್ತಿಯನ್ನು ಖರೀದಿ ಮಾಡಿದರು ಎಂದು ನನಗೆ ಗೊತ್ತಿಲ್ಲ. ನಾನು ಆಸ್ತಿ ಖರೀದಿ ಮಾಡುವಾಗ ದಾಖಲೆ ನೋಡಿಯೇ ಖರೀದಿ ಮಾಡಿದ್ದೇನೆ. ಸತ್ಯಾಂಶ ಗೊತ್ತಿದ್ದರೂ ಸಹ ನ್ಯಾಯಾಲಯಕ್ಕೆ ಅದನ್ನು ಮರೆಮಾಚಿ ಮೋಸದಿಂದ ದಾವಾ ಮಾಡಿದ್ದೇನೆಂದರೆ ಸರಿಯಲ್ಲ. ಸದರಿ ಇವತ್ತಿನ ದಿವಸ ನಾನು ಖರೀದಿ ಮಾಡಿದೆ ಎಂದು ಹೇಳುವಂತಹ ಆಸ್ತಿ ಆ ಸ್ಥಳದಲ್ಲಿ ಇಲ್ಲವೆಂದರೆ ಸರಿಯಲ್ಲ.

..10.. ಸದರಿ ಸಾಕ್ಷಿಗೆ ವಾದಿಯ ದಾಖಲೆಗಳನ್ನು ತೋರಿಸಿ ಅವುಗಳನ್ನು ನೋಡಿ ಯಾರೆಲ್ಲ ಖರೀದಿ ಮಾಡಿದ್ದಾರೆಂದು ಹೇಳಲು ಆಗುತ್ತಾ ಎಂದರೆ ಇಲ್ಲವೆಂದು ನುಡಿಯುತ್ತಾನೆ. ನನಗೆ ಕನ್ನಡ ಓದಲು ಬರುತ್ತದೆ. ಸದರಿ ದಾಖಲೆಗಳನ್ನು ನೋಡಿಯೂ ಸಹ ಯಾರು ಯಾವಾಗ ಖರೀದಿ ಮಾಡಿದರೆಂದು ನಾನು ಖಾತ್ರಿ ಮಾಡಿಕೊಳ್ಳಲಿಲ್ಲ ಕಾರಣ ಖರೀದಿ ಮಾಡಿದಾಗ ಎಲ್ಲಾ ಕ್ಲೀಯರ್ ಎಂದು ನುಡಿಯುತ್ತಾನೆ. ಅದೇ ರೀತಿ ಆ ದಾಖಲೆ ನೋಡಬೇಕೆನ್ನಿಸಲಿಲ್ಲ. ನಾನು ಸತ್ಯಾಂಶ ಮುಚ್ಚಿಟ್ಟು ಖರೀದಿ ಮಾಡಿದಂತಹ ಆಸ್ತಿಯ ಮೇಲೆ ನನಗೆ ಯಾವುದೇ ರೀತಿ ಹಕ್ಕು ಪ್ರಾಪ್ತವಾಗಲಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇ ಎ ಒಪ್ಪಿಕೊಳ್ಳಲಾಯಿತು.

1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
**ಹುಬ್ಬಳ್ಳಿ.**

**ಓ ಎಸ್ ನಂಃ 230-16** **ಪಿಡಬ್ಲ್ಯೂ - 1**

**ಸಾಕ್ಷಿಯನ್ನು ದಿನಾಂಕಃ 20.06.2018 ರಂದು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲುಃ ಶ್ರೀ MSB ವಕೀಲರಿಂದ ಎದುರುದಾರರ ಪರವಾಗಿಃ-**

**..2..**ವಿಧವಾ ವೇತನಕ್ಕೆ ಅರ್ಜಿ ಸಲ್ಲಿಸುವಾಗ ಪ್ರಮಾಣ ಪತ್ರ ಸಲ್ಲಿಸಿ ಅದರಲ್ಲಿ ನನಗೆ ಯಾವುದೇ ಆದಾಯ ಇಲ್ಲ, ನನಗೆ ಯಾರು ಇಲ್ಲ, ಮತ್ತು ಆಸ್ತಿ ಸಹ ಇಲ್ಲವೆಂದು ಸಲ್ಲಿಸಿದ್ದೇನೆ. ಆ ವಿಧವಾ ವೇತನ ನಾನು ಈಗಲೂ ಸಹ ಪಡೆಯುತ್ತಿದ್ದೇನೆಂದರೆ ಹೌದು.

..3.. ನನ್ನ ಮದುವೆ ಎಲ್ಲಿ ಯಾವಾಗ ಆಯಿತೆಂದು ಹೇಳಿ ಬರೆಸಿದ್ದೇನೆ. ನನ್ನ ಮದುವೆಯನ್ನು ಮೂರುಸಾವಿರ ಮಠದಲ್ಲಿ ಸ್ವಾಮಿ ರವರು ಮಾಡಿದ್ದಾರೆ ಅವರು ಮರಣ ಹೊಂದಿದ್ದಾರೆ. ನನಗೆ ದಿನಾಂಕ, ತಿಂಗಳು ನೆನಪಿಲ್ಲ ಆದರೆ 1969 ರಲ್ಲಿ ಮದುವೆಯಾಗಿರುತ್ತೇನೆ. ಯಾವುದೇ ಮಠ ಅಥವಾ ದೇವಸ್ಥಾನದಲ್ಲಿ ಮದುವೆಯಾದರೆ ಅದಕ್ಕೆ ಸಂಬಂಧಪಟ್ಟವರು ಆ ಬಗ್ಗೆ ನೋಂದಣಿ ಪುಸ್ತಕ ಇಟ್ಟಿಕೊಂಡಿರುತ್ತಾರೆಂದರೆ ಹೌದು. ಸದರಿ ಪ್ರತಿವಾದಿ ತನ್ನ ಪ್ರತಿವಾದ ಪತ್ರದಲ್ಲಿ ನನಗೆ ಆಸ್ತಿ ಕೊಡುವುದಿಲ್ಲವೆಂದು ತಕರಾರು ಹಾಕಿದ್ದಾನೆ. ಸದರಿ ಪ್ರತಿವಾದ ಪತ್ರದಲ್ಲಿ ಆತ ನಾನು ಹೆಂಡತಿ ಅಲ್ಲವೆಂದು ಬರೆದಿದ್ದಾನೆಂದರೆ ಬರೆಯಲಿ ನಾನೇ ಹೆಂಡತಿ ಎಂದು ಸಾಕ್ಷಿ ನುಡಿಯುತ್ತಾಳೆ. ಸದರಿ ಮೂರುಸಾವಿರ ಮಠದಿಂದ ನನ್ನ ಮದುವೆ ಬಗ್ಗೆ ದಾಖಲೆ ಕೊಟ್ಟು ಅರ್ಜಿ ಸಲ್ಲಿಸಿದ್ದೇವೆ ಆ ಅರ್ಜಿಯ ಪ್ರತಿಯನ್ನು ಸಹ ನ್ಯಾಯಾಲಯದಲ್ಲಿ ಸಲ್ಲಿಸಿದ್ದೇವೆ. ಸದರಿ ಮೂರುಸಾವಿರ ಮಠದಲ್ಲಿ 1969 ನೇ ಇಸ್ವಿಯಲ್ಲಿ ನಾನು ಹೇಳಿದಂತಹ ನನ್ನ ಮದುವೆ ಆಗಿಲ್ಲ ಎಂದರೆ ಸರಿಯಲ್ಲ. ಆ ಬಗ್ಗೆ ನಾನು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಹೌದು. ನಾನು ಮದುವೆ ಕಾರ್ಡ ಆಗಲಿ ಅಥವಾ ಮದುವೆ ಸರ್ಟಿಫಿಕೇಟನ್ನು ಹಾಜರುಪಡಿಸಿಲ್ಲ. ಯಲ್ಲಪ್ಪನಗೌಡನ ಮನೆತನಕ್ಕೂ ಹಾಗೂ ಮುಂಡವಾಡನ ಮನೆತನಕ್ಕೂ ಮೊದಲಿನಿಂದಲೂ ಸರಿಯಿಲ್ಲ ಎಂದರೆ ಸರಿಯಲ್ಲ. ಆದರೆ ಗೈರು ಪಾಯದೆಯನ್ನು ತೆಗೆದುಕೊಂಡು ನಾನು ಯಲ್ಲಪ್ಪನಗೌಡ ಹೆಂಡತಿ ಎಂದು ಸುಳ್ಳು ವಾದಿಸುತ್ತಿದ್ದೇನೆಂದರೆ ಸರಿಯಲ್ಲ.

..4.. ಯಲ್ಲಪ್ಪಗೌಡ ಮರಣ ಹೊಂದಿದ ನಂತರ 1 ನೇ ಪ್ರತಿವಾದಿ ಆತನ ಜಮೀನನ್ನು ಸಾಗುವಳಿ ಮಾಡಿಕೊಂಡು ಬರುತ್ತಿದ್ದಾನೆಂದರೆ ಹೌದು. 1 ನೇ ಪ್ರತಿವಾದಿ ತನ್ನದೇ ಆದಂತಹ ಸ್ವತಃ ಎತ್ತು, ದನ ಮತ್ತು ಗಳೆ ಸಾಮಾನುಗಳನ್ನು ಇಟ್ಟುಕೊಂಡು ವ್ಯವಸಾಯ ಮಾಡಿಕೊಳ್ಳುತ್ತಾನೆ ಎಂದರೆ ಸರಿಯಲ್ಲ ಭಾಡಿಗೆ ಇಟ್ಟುಕೊಂಡು ಸಾಗುವಳಿ ಮಾಡುತ್ತಾನೆ.

**ಓ ಎಸ್ ನಂಃ 230-16** **ಪಿಡಬ್ಲ್ಯೂ - 1**

ಸದರಿ 1 ನೇ ಪ್ರತಿವಾದಿಗೆ ಸೇರಿದ ಚರಾಸ್ತಿಗಳು ಇವೆ ಎಂದರೆ ಹೌದು. ಆ ಚರಾಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಹೌದು. ಸದರಿ1 ನೇ ಪ್ರತಿವಾದಿಗೆ ಬೇರೆ ಎಷ್ಟು ಹೊಲ ಅಥವಾ ಆಸ್ತಿ ಇವೆ ಎಂದು ಅವುಗಳನ್ನೆಲ್ಲಾ ಸೇರಿಸಿಲ್ಲವೆಂದರೆ ಸಾಕ್ಷಿ ನನಗೆಷ್ಟು ಮಾಹಿತಿ ಇದಿಯೋ ಅಷ್ಟು ಆಸ್ತಿಗಳನ್ನು ಸೇರಿಸಿದ್ದೇನೆಂದು ನುಡಿಯುತ್ತಾಳೆ. 1 ನೇ ಪ್ರತಿವಾದಿಗೆ ಎಷ್ಟು ಒಟ್ಟು ಆಸ್ತಿಗಳಿವೆ ಎಂದು ಸಂಪೂರ್ಣವಾಗಿ ತಿಳಿದುಕೊಳ್ಳದೇ ಈ ದಾವೆ ಸಲ್ಲಿಸಿದ್ದೇನೆಂದರೆ ಹೌದು. ಸಂಗನಗೌಡನಿಗೆ ಇನ್ನೂ ಬೇರೆ ಆಸ್ತಿಗಳಿವೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತವರು ಮನೆಯವರ ಮಾತು ಕೇಳಿ 1 ನೇ ಪ್ರತಿವಾದಿಗೆ ವಿನಾಕಾರಣ ತೊಂದರೆ ಕೊಡಲು ಸುಳ್ಳು ದಾವಾ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ಯಲ್ಲಪ್ಪಗೌಡ ಹನಮಂತಗೌಡನ ಹೆಂಡತಿಯೂ ಅಲ್ಲ ಮತ್ತು 1 ನೇ ಪ್ರತಿವಾದಿಯ ತಾಯಿಯೂ ಅಲ್ಲವೆಂದರೆ ಸರಿಯಲ್ಲ. ನಿಪಿ.9 ನ್ನು ಇತ್ತೀಚೆಗೆ ಪ್ರಕರಣಕ್ಕೆ ಅನುಕೂಲವಾಗಲೆಂದು ಸೃಷ್ಟಿ ಮಾಡಿ ತಂದು ಹಾಜರುಪಡಿಸಿದ್ದೇನೆಂದರೆ ಸರಿಯಲ್ಲ. ಕಿಮ್ಮತ್ತಿನ ಆಸ್ತಿಯನ್ನು ಹೊಡೆಯಲು ಸುಳ್ಳು ದಾವೆಯನ್ನು ಮಾಡಿದ್ದೇವೆಂದರೆ ಸರಿಯಲ್ಲ. ದಾವಾ ಆಸ್ತಿಯ ಮೇಲೆ ನನಗೆ ಯಾವುದೇ ಹಕ್ಕು ಇಲ್ಲದಿದ್ದರೂ ಸಹ ಸುಳ್ಳು ದಾವಾ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇ ಎ ಒಪ್ಪಿಕೊಳ್ಳಲಾಯಿತು.

1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
**ಹುಬ್ಬಳ್ಳಿ.**

**ಓ ಎಸ್ ನಂಃ 230-16** **ಪಿಡಬ್ಲ್ಯೂ - 2**

**ಸಾಕ್ಷಿಯನ್ನು ದಿನಾಂಕಃ 20.06.2018 ರಂದು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಎಂ ಎಸ್ ಬಿ ವಕೀಲರಿಂದ ಪ್ರತಿವಾದಿಯರ ಪರವಾಗಿಃ-**

..ನನಗೆ ನ್ಯಾಯಾಲಯದಿಂದ ನನಗೆ ಸಮನ್ಸ ಬಂದಿಲ್ಲ. ಸದರಿ ಈ ದಾವಾ ನನ್ನ ಅಕ್ಕ ಮತ್ತು ಮಗನ ಮದ್ಯೆ ನಡೆದಿದೆ. ಸದರಿ ದಾವಾ ಯಾವ ಆಸ್ತಿಗಳಿಗೆ ಸಲ್ಲಿಸಿದ್ದಾರೆಂದು ದಾಖಲೆ ನೋಡಿಲ್ಲ ಆದರೆ ನನ್ನ ಅಕ್ಕನಿಗೆ ಆಸ್ತಿ ಕೊಟ್ಟಿಲ್ಲವೆಂಬ ಕಾರಣಕ್ಕಾಗಿ ಸಲ್ಲಿಸಲಾಗಿದೆ. ನನ್ನ ಊರಿನಲ್ಲಿ ನನಗಿಂತ ಹಿರಯರು ಬಹಳ ಜನ ಇದ್ದಾರೆಂದರೆ ಹೌದು. ನಾನು ಹಳ್ಯಾಳ ಬಿಟ್ಟು ಈಗ 10-12 ವರ್ಷ ಆಯಿತು. ನಾನು ಈಗ ಖಾಯಂ ಆಗಿ ಅದರಗುಂಚಿ ಗ್ರಾಮದಲ್ಲಿ ವಾಸವಾಗಿದ್ದೇನೆ. ಹಳ್ಯಾಳ ಗ್ರಾಮದಲ್ಲಿ ಸಧ್ಯ ನನಗೆ ಸೇರಿದ ಯಾವುದೇ ಆಸ್ತಿ ಯಾವುದು ಇಲ್ಲ ಎಲ್ಲಾ ಮಾರಾಟ ಮಾಡಿದ್ದೇವೆ. ನಾನು ಬಿಲ್ಡಿಂಗ ಕಟ್ಟಡಕ್ಕೆ ನೀರು ಹೊಡೆಯುವುದು ಮತ್ತು ವಾಚಮನ್ ಕೆಲಸ ಮಾಡುತ್ತೇನೆಂದರೆ ಸರಿಯಲ್ಲ ನಾನು ವ್ಯವಸಾಯ ಮಾಡುತ್ತೇನೆ. ನಾನು ಊರಿನಲ್ಲಿ ಶೇತ್ಕಿ ಎಂದರೆ ಕೂಲಿ ಕೆಲಸಕ್ಕೆ ಹೋಗುತ್ತೇನೆ. ಸದರಿ ನನ್ನ ಅಕ್ಕ ಸುಮಾರು ವರ್ಷಗಳಿಂದ ಹುಬ್ಬಳ್ಳಿಯ ಇಟ್ಟಿಗೆ ಮಾರುತಿಗಲ್ಲಿಯಲ್ಲಿ ವಾಸವಾಗಿದ್ದಾಳೆಂದರೆ ನನ್ನ ಮಾವ ಯಲ್ಲಪ್ಪಗೌಡ ಸತ್ತಾಗಿನಿಂದ ವಾಸವಾಗಿದ್ದಾಳೆ. ನನ್ನ ಮಾವ ಮರಣ ಹೊಂದಿ 7 ವರ್ಷಗಳಾಯಿತು. ಸದರಿ ನನ್ನ ಅಕ್ಕ ಸಿದ್ದಪ್ಪ ಗಿರಡ್ಡಿ ಜೊತೆಗೆ ವಾಸವಾಗಿದ್ದಾಳೆಂದರೆ ಸರಿಯಲ್ಲ ಅವನಿಗೂ ನಮಗೂ ಸಂಬಂಧ ಇಲ್ಲವೆಂದು ನುಡಿಯುತ್ತಾನೆ. ಸದರಿ ಸಿದ್ದಪ್ಪ ಗಿರಡ್ಡಿ ಹುಬ್ಬಳ್ಳಿ ಇಟ್ಟಿಗೆ ಮಾರುತಿಗಲ್ಲಿಯಲ್ಲಿ ವಾಸವಾಗಿದ್ದಾನೆಂದರೆ ಅದು ನನಗೆ ಗೊತ್ತಿಲ್ಲ. ಸದರಿ ನನ್ನ ಅಕ್ಕ ಸಿದ್ದಪ್ಪ ಗಿರಡ್ಡಿ ಜೊತೆಗೆ ಸುಮಾರು ವರ್ಷಗಳಿಂದ ಹುಬ್ಬಳ್ಳಿ ಇಟ್ಟಿಗೆ ಮಾರುತಿಗಲ್ಲಿಯಲ್ಲಿ ವಾಸವಾಗಿದ್ದರೂ ಇಲ್ಲವೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

..2.. ಸದರಿ ಯಲ್ಲಪ್ಪಗೌಡನ ಜೊತೆಗೆ ನಾನು ಹೇಳುವಂತಹ ನನ್ನ ಅಕ್ಕನ ಮದುವೆ ಆದಾಗ ನನಗೆ 15-16 ವರ್ಷಗಳು. ಸದರಿ ಹಳ್ಯಾಳ ಗ್ರಾಮದಲ್ಲಿ 80-100 ವರ್ಷ ವಯಸ್ಸಿನವರು ಇನ್ನೂ ಇದ್ದಾರೆಂದರೆ ಇದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. 15-16 ವರ್ಷ ಪ್ರಾಯದಲ್ಲಿ ಅಷ್ಟೊಂದು ತಿಳುವಳಿಕೆ ಇರುವುದಿಲ್ಲವೆಂದರೆ ಹೌದು ಸ್ವಲ್ಪ ತಿಳುವಳಿಕೆ ಇರುತ್ತದೆಂದು ನುಡಿಯುತ್ತಾನೆ. ಸದರಿ ಮೂರುಸಾವಿರಮಠದಲ್ಲಿ ಆಗಿದೆ ಎಂದು ಹೇಳಲಾದಂತಹ ಮದುವೆ ಯಾವ ಇಸ್ವಿ, ತಾರೀಖು, ನಕ್ಷತ್ರ, ಸಂಸಸ್ತರ ನನಗೆ ಗೊತ್ತಿಲ್ಲವೆಂದರೆ ಸಾಕ್ಷಿ ನನಗೆ ನೆನಪಿಲ್ಲವೆಂದು ನುಡಿಯುತ್ತಾನೆ.

**ಓ ಎಸ್ ನಂಃ 230-16** **ಪಿಡಬ್ಲ್ಯೂ - 2**

ಸದರಿ 1 ನೇ ಪ್ರತಿವಾದಿ ಈ ಕೊಟ್ರವ್ವ ತನ್ನ ತಾಯಿ ಅಲ್ಲವೆಂದು ತಕರಾರು ಸಲ್ಲಿಸಿದ್ದಾನೆಂದರೆ ಹೌದು. ಈಗಿನ ಕಾಲಮಾನ ಪ್ರಕಾರ ನನಗೆ ತಿಳುವಳಿಕೆ ಇದೆ ಎಂದರೆ ಹೌದು.

**ಹೆಚ್ಚಿನ ಪಾಟಿ ಸವಾಲಿಗಾಗಿ ವೇಳೆ ಕೇಳಿದ್ದರಿಂದ ಪ್ರಕರಣ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇ ಎ ಒಪ್ಪಿಕೊಳ್ಳಲಾಯಿತು.

1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
**ಹುಬ್ಬಳ್ಳಿ.**

..

**ಓ ಎಸ್ ನಂಃ43-16** **ಪಿಡಬ್ಲ್ಯೂ - 1**

**ಸಾಕ್ಷಿಯನ್ನು ದಿನಾಂಕಃ 20.06.2018 ರಂದು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

ತನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ದಾಖಲಿಸಿದ್ದು ಅದರಲ್ಲಿರುವ ಸಂಗತಿಗಳು ಸತ್ಯ ಹಾಗೂ ಸರಿ ಇರುತ್ತವೆ.

**ಶ್ರೀ MSB ವಕೀಲರಿಂದ ಅನುಮತಿ ಮೇರೆಗೆ ಹೆಚ್ಚಿನ ಮುಖ್ಯ ವಿಚಾರಣೆಃ-**

.ಮಿಸ್ 5-08 ರ ಅರ್ಜಿ, ತಕರಾರು, ಮೆಮೋ ಮತ್ತು ತಕರಾರುಗಳ ದೃಢೀಕೃತ ನಕಲುಗಳನ್ನು ಹಾಜರುಪಡಿಸಿದ್ದುಅವುಗಳನ್ನು ನಿಪಿ.16 ರಿಂದ 19 ಎಂದು, ಎಲ್ ಎ ಸಿ 49-04 ರ ಡಿಕ್ರಿ, ರೋಜನಾಮೆಯ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅವುಕಿಗಳನ್ನು ನಿಪಿ.20 ಹಾಗೂ 21 ಎಂದು, ಮಿಸ್ 5-08 ರ ಹೇಳಿಕೆಯ ದೃಢೀಕೃತ ನಕಲನ್ನು ನಿಪಿ.22 ಎಂದು, ಮಿಸ್ 6-08 ರ ಅರ್ಜಿ ಮತ್ತು ತಕರಾರಿನ ದೃಢೀಕೃತ ನಕಲು ನಿಪಿ.23 ಹಾಗೂ 24 ಎಂದು, ಎಲ್ ಎ ಸಿ 45-04 ರ ಡಿಕ್ರಿ ದೃಢೀಕೃತ ನಕಲು ನಿಪಿ.25 ಎಂದು, ಮಿಸ್ 5-08 ರ ಹೇಳಿಕೆಯ ದೃಢೀಕೃತ ನಕಲನ್ನು ನಿಪಿ.26 ಎಂದು, ಮತ್ತು ಅದೇ ಪ್ರಕರಣದ ರೋಜನಾಮೆಯ ದೃಢೀಕೃತ ನಕಲನ್ನು ನಿಪಿ.27 ಎಂದು, ಮಿಸ್ 7-08 ರ ಅರ್ಜಿ ಹಾಗೂ ತಕರಾರು ಮತ್ತು ಹೇಳಿಕೆಯ ದೃಢೀಕೃತ ನಕಲುಗಳನ್ನು ನಿಪಿ.28 ರಿಂದ 30 ಎಂದು ಗುರುತಿಸಲಾಯಿತು.

**ಪಾಟಿ ಸವಾಲಿಗಾಗಿ ವೇಳೆ ಕೇಳಿದ್ದರಿಂದ ಪ್ರಕರಣ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇ ಎ ಒಪ್ಪಿಕೊಳ್ಳಲಾಯಿತು.

1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
**ಹುಬ್ಬಳ್ಳಿ.**

..

**ಓ ಎಸ್ ನಂಃ 188-14** **ಪಿಡಬ್ಲ್ಯೂ-1**

**ಸಾಕ್ಷಿಯನ್ನು ದಿನಾಂಕಃ 20.06.2018 ರಂದು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಸಿ ಹೆಚ್ ಎಸ್ ವಕೀಲರಿಂದ ಎದುರುದಾರರ ಪರವಾಗಿಃ-**

**..6..**ಪ್ರತಿವಾದಿ -1 ನನ್ನತಾಯಿ, ಪ್ರತಿವಾದಿ -3 ನನ್ನ ಅಕ್ಕ. ನನ್ನ ತಂದೆ ನೌಕರಿ ಮಾಡುತ್ತಿದ್ದರೆಂದರೆ ಹೌದು. ಸದರಿ ನನ್ನ ತಂದೆ ತನ್ನ ನೌಕರಿಯಿಂದ ಬಂದ ಆದಾಯದಿಂದಲೇ ಆಸ್ತಿ ಖರೀದಿ ಮಾಡಿ ಮನೆ ಕಟ್ಟಿದ್ದಾರೆಂದರೆ ಹೌದು. ಅದೇ ರೀತಿ ಅದೇ ಮನೆಯ ಮೇಲೆ 1 ನೇ ಅಂತಸ್ತು ಕಟ್ಟಡ ಕಟ್ಟುವಾಗ ಸಾಲ ಮಾಡಿದ್ದಾರೆಂದರೆ ಹೌದು. ನನ್ನ ತಂದೆ ಮರಣ ಹೊಂದಿದಾಗ ಆ ಸಾಲ ಬಾಕಿ ಇತ್ತು ಎಂದರೆ ಹೌದು. ಸದರಿ ನನ್ನ ತಂದೆ ಮರಣ ಹೊಂದಿದ ನಂತರ ನನ್ನ ತಾಯಿ ಮತ್ತು ನಾನು ಆ ಸಾಲವನ್ನು ತುಂಬುತ್ತಿದ್ದೇವೆ. ದಾವಾದ ಇನ್ನೊಂದು ಆಸ್ತಿ ನಮ್ಮ ಪಿತ್ರಾರ್ಜಿತ ಆಸ್ತಿ ಎಂದರೆ ಹೌದು. ನನ್ನ ತಾಯಿ ಹಾಗೂ ನನ್ನ ಅಕ್ಕ ದಾವಾ ಆಸ್ತಿಯಲ್ಲಿ ನನ್ನ ಜೊತೆಗೆ ಸಮನಾದ ಹಿಸ್ಸಾ ಮತ್ತು ಹಕ್ಕನ್ನು ಹೊಂದಿದ್ದಾರೆಂದರೆ ಹೌದು.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇ ಎ ಒಪ್ಪಿಕೊಳ್ಳಲಾಯಿತು.

1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
**ಹುಬ್ಬಳ್ಳಿ.**

..

**ಓ ಎಸ್ ನಂಃ** **ಪಿಡಬ್ಲ್ಯೂ -**

**ಸಾಕ್ಷಿಯನ್ನು ದಿನಾಂಕಃ 20.06.2018 ರಂದು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

ತನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ದಾಖಲಿಸಿದ್ದು ಅದರಲ್ಲಿರುವ ಸಂಗತಿಗಳು ಸತ್ಯ ಹಾಗೂ ಸರಿ ಇರುತ್ತವೆ.

**ಶ್ರೀ ....ವಕೀಲರಿಂದ ಅನುಮತಿ ಮೇರೆಗೆ ಹೆಚ್ಚಿನ ಮುಖ್ಯ ವಿಚಾರಣೆಃ-**

.

ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀ .....ವಕೀಲರಿಂದ ಎದುರುದಾರರ ಪರವಾಗಿಃ-**

.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇ ಎ ಒಪ್ಪಿಕೊಳ್ಳಲಾಯಿತು.

1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
**ಹುಬ್ಬಳ್ಳಿ.**

..

**ಓ ಎಸ್ ನಂಃ** **ಪಿಡಬ್ಲ್ಯೂ-**

**ಸಾಕ್ಷಿಯನ್ನು ದಿನಾಂಕಃ 20.06.2018 ರಂದು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

ತನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ದಾಖಲಿಸಿದ್ದು ಅದರಲ್ಲಿರುವ ಸಂಗತಿಗಳು ಸತ್ಯ ಹಾಗೂ ಸರಿ ಇರುತ್ತವೆ.

**ಶ್ರೀ ....ವಕೀಲರಿಂದ ಅನುಮತಿ ಮೇರೆಗೆ ಹೆಚ್ಚಿನ ಮುಖ್ಯ ವಿಚಾರಣೆಃ-**

.

ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀ .....ವಕೀಲರಿಂದ ಎದುರುದಾರರ ಪರವಾಗಿಃ-**

.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇ ಎ ಒಪ್ಪಿಕೊಳ್ಳಲಾಯಿತು.

1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
**ಹುಬ್ಬಳ್ಳಿ.**

..

**ಓ ಎಸ್ ನಂಃ** **ಪಿಡಬ್ಲ್ಯೂ-**

**ಸಾಕ್ಷಿಯನ್ನು ದಿನಾಂಕಃ 20.06.2018 ರಂದು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

ತನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ದಾಖಲಿಸಿದ್ದು ಅದರಲ್ಲಿರುವ ಸಂಗತಿಗಳು ಸತ್ಯ ಹಾಗೂ ಸರಿ ಇರುತ್ತವೆ.

**ಶ್ರೀ ....ವಕೀಲರಿಂದ ಅನುಮತಿ ಮೇರೆಗೆ ಹೆಚ್ಚಿನ ಮುಖ್ಯ ವಿಚಾರಣೆಃ-**

.

ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀ .....ವಕೀಲರಿಂದ ಎದುರುದಾರರ ಪರವಾಗಿಃ-**

.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇ ಎ ಒಪ್ಪಿಕೊಳ್ಳಲಾಯಿತು.

1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
**ಹುಬ್ಬಳ್ಳಿ.**

..

**ಓ ಎಸ್ ನಂಃ** **ಪಿಡಬ್ಲ್ಯೂ-**

**ಸಾಕ್ಷಿಯನ್ನು ದಿನಾಂಕಃ 20.06.2018 ರಂದು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

ತನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ದಾಖಲಿಸಿದ್ದು ಅದರಲ್ಲಿರುವ ಸಂಗತಿಗಳು ಸತ್ಯ ಹಾಗೂ ಸರಿ ಇರುತ್ತವೆ.

**ಶ್ರೀ ....ವಕೀಲರಿಂದ ಅನುಮತಿ ಮೇರೆಗೆ ಹೆಚ್ಚಿನ ಮುಖ್ಯ ವಿಚಾರಣೆಃ-**

.

ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀ .....ವಕೀಲರಿಂದ ಎದುರುದಾರರ ಪರವಾಗಿಃ-**

.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇ ಎ ಒಪ್ಪಿಕೊಳ್ಳಲಾಯಿತು.

1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
**ಹುಬ್ಬಳ್ಳಿ.**

..

**ಓ ಎಸ್ ನಂಃ** **ಪಿಡಬ್ಲ್ಯೂ-**

**ಸಾಕ್ಷಿಯನ್ನು ದಿನಾಂಕಃ 20.06.2018 ರಂದು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

ತನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ದಾಖಲಿಸಿದ್ದು ಅದರಲ್ಲಿರುವ ಸಂಗತಿಗಳು ಸತ್ಯ ಹಾಗೂ ಸರಿ ಇರುತ್ತವೆ.

**ಶ್ರೀ ….ವಕೀಲರಿಂದ ಅನುಮತಿ ಮೇರೆಗೆ ಹೆಚ್ಚಿನ ಮುಖ್ಯ ವಿಚಾರಣೆಃ-**

.

ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀ …..ವಕೀಲರಿಂದ ಎದುರುದಾರರ ಪರವಾಗಿಃ-**

.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇ ಎ ಒಪ್ಪಿಕೊಳ್ಳಲಾಯಿತು.

1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
**ಹುಬ್ಬಳ್ಳಿ.**